ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (329)311
ಸದಸ್ಯರ ಹೆಸರು : ಶ್ರೀ ಕೃಷ್ಣಮೂರ್ತಿ.ಕೆ.ಎಂ. (ಕಡೂರು)
ಉತ್ತರಿಸುವ ಸಚಿವರು : (ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ)
: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) ರಾಜ್ಯದಲ್ಲಿ 29 ವರ್ಷ ದಾಟಿದ ಪದವೀಧರರ ಸಂಖ್ಯೆ ಎಷ್ಟು; ಪ್ರಾಥಮಿಕ ಶಾಲೆಗಳಲ್ಲಿ 29 ವರ್ಷ ದಾಟಿದ ಟಿ.ಸಿ.ಹೆಚ್ ಮಾಡಿದವರಿಗೆ ಆದ್ಯತೆ ನೀಡಿ ನೇಮಕಾತಿ ಮಾಡಲಾಗಿದೆಯೇ; ಬಿ.ಎಡ್ ಮಾಡಿದ 29 ವರ್ಷ ಮೀರಿದ ಪದವೀಧರರಿಗೆ ಪ್ರೌಢಶಾಲೆಯಲ್ಲಿ ನೇಮಕಾತಿ ಮಾಡಲು ಸರ್ಕಾರ ತೀರ್ಮಾನಿಸಿದೆಯೇ; ಹಾಗಿದ್ದಲ್ಲಿ ಯಾವಾಗ ನೇಮಕಾತಿ ಮಾಡಲಾಗುವುದು; ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು;

- ರಾಜ್ಯದಲ್ಲಿ 29 ವರ್ಷ ದಾಟಿದ ಪದವೀಧರರ ಸಂಖ್ಯೆಯ ವಿವರ ಈ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.
- ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 29 ವರ್ಷ ದಾಟಿದ 2254 ಹುದ್ದೆಗಳಿಗೆ ಟಿ.ಸಿ.ಎಚ್ ಮಾಡಿದವರಿಗೆ ಆದ್ಯತೆ ನೀಡಿ ನೇಮಕಾತಿ ಮಾಡಲಾಗುತ್ತಿದೆ.
- ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿಗಾಗಿ ಈ ಕೆಳಕಂಡ ಕನಿಷ್ಟ ಮತ್ತು ಗರಿಷ್ಠ ವಯೋಮಿತಿಯನ್ನು ನಿಗಧಿಪಡಿಸಲಾಗಿದೆ:–

  ಕನಿಷ್ಟ ವಯೋಮಿತಿ – 20ವರ್ಷಗಳು
  ಗರಿಷ್ಠ ವಯೋಮಿತಿ:–
  ಪರಿಶಿಷ್ಟ ಜಾತಿ/ಪಂಗಡ – 45 ವರ್ಷಗಳು
  ಹಿಂದುಳಿದ ವರ್ಗಗಳು – 43 ವರ್ಷಗಳು
  ಇತರರಿಗೆ – 40 ವರ್ಷಗಳು.
- ಮೇಲೆ ಸೂಚಿಸಿರುವ ವಯೋಮಿತಿಯನ್ನು ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಪಾಲಿಸುತ್ತಿರುವುದರಿಂದ ಬಿ.ಇಡಿ ಮಾಡಿದ 29 ವರ್ಷ ಮೀರಿದ ಪದವೀಧರರಿಗೆ ಪ್ರೌಢಶಾಲೆಗಳಿಗೆ ಪ್ರತ್ಯೇಕವಾಗಿ ನೇಮಕಾತಿ ಮಾಡುವ ಪ್ರಸ್ತಾವ ಇರುವುದಿಲ್ಲ.

ಆ) 2008–09ನೇ ಸಾಲಿನಲ್ಲಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

2008–09ನೇ ಸಾಲಿಗೆ ಸಂಬಂಧಿಸಿದಂತೆ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಮಾಹಿತಿಯನ್ನು ವಿಭಾಗೀಯ ಸಹನಿರ್ದೇಶಕರಿಂದ ಪಡೆಯಲಾಗುತ್ತಿದೆ. ಮಾಹಿತಿ ಬಂದ ನಂತರ ಶಿಕ್ಷಕರನ್ನು ನೇಮಕ ಮಾಡಲಾಗುವುದು.

ಇ) 2008–09ನೇ ಸಾಲಿನಲ್ಲಿ ನೇಮಕಾತಿ ಮಾಡಲಾಗಿರುವ ಸಂಖ್ಯೆ ಎಷ್ಟು (ವಿವರ ನೀಡುವುದು);

ಈ) PCM/CBZ (ಪಿಸಿಎಂ/ಸಿಬಿಝಡ್) ಆದವರಿಗೆ ಪ್ರಾಥಮಿಕ ಶಾಲೆಗಳಲ್ಲಿ ನೇಮಿಸಿದಂತೆ ಶಾಲಾ ಶಿಕ್ಷಕರನ್ನು ಪ್ರಾಥಮಿಕ ಶಾಲೆಗಳಲ್ಲಿ ನೇಮಿಸಲು ಸರ್ಕಾರ ಚಿಂತಿಸಿದೆಯೇ; ಚಿಂತಿಸಿದ್ದಲ್ಲಿ, ಯಾವಾಗ ನೇಮಕ ಮಾಡಲಾಗುವುದು;

- ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಶಿಕ್ಷಕರು ಇರುತ್ತಾರೆ.
- ಸರ್ಕಾರಿ ಪ್ರೌಢಶಾಲೆಗಳಿಗೆ ಪಿಸಿಎಂ ಮತ್ತು ಸಿಬಿಝಡ್ ಶಿಕ್ಷಕರನ್ನು ಸಹ ನೇಮಕ ಮಾಡಲಾಗುತ್ತಿದೆ. ಸರ್ವ ಶಿಕ್ಷಣ ಅಭಿಯಾನದಡಿ ಉನ್ನತೀಕರಿಸಿದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ (8ನೇ ತರಗತಿ) 5356 ಪಿಸಿಎಂ ಶಿಕ್ಷಕರನ್ನು ನೇಮಕಾತಿ ಮಾಡಲಾಗಿದೆ.

ಉ) ಸರ್ಕಾರ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಸರ್ಕಾರಿ ಪ್ರೌಢಶಾಲೆ/ಪದವಿ ಪೂರ್ವ ಕಾಲೇಜುಗಳನ್ನು ನೂತನವಾಗಿ ಆರಂಭಿಸುವ ಬಗ್ಗೆ ಸರ್ಕಾರದ ನಿರ್ಧಾರಗಳೇನು (ವಿವರ ನೀಡುವುದು);

- ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಬೇಡಿಕೆ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುವುದು.
- ಶೈಕ್ಷಣಿಕ ವರ್ಷ ಪ್ರಾರಂಭವಾಗಿರುವುದರಿಂದ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗುತ್ತಿಲ್ಲ.

ಊ) ನೂತನ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶೈಕ್ಷಣಿಕ ವರ್ಷ ಪ್ರಾರಂಭವಾಗಿರುವುದರಿಂದ ನೂತನ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲಾಗುತ್ತಿಲ್ಲ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (330)312
2) ಸದಸ್ಯರ ಹೆಸರು : ಶ್ರೀ.ಕೃಷ್ಣಮೂರ್ತಿ ಕೆ.ಎಂ.
3) ಉತ್ತರಿಸುವ ಸಚಿವರು : (ಶ್ರೀ ರೇವುನಾಯಕ್ ಬೆಳಮಗಿ)
: ಮಾನ್ಯ ಪಶುಸಂಗೋಪನೆ ಸಚಿವರು

ಅ) ಅಮೃತಮಹಲ್ ಕಾವಲ್ ನಲ್ಲಿ ಅನೇಕರು ಅತಿಕ್ರಮ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಹೌದು. ಅಮೃತಮಹಲ್ ಕಾವಲಿನಲ್ಲಿ ಅತಿಕ್ರಮ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹಾಗಿದ್ದಲ್ಲಿ ಇದನ್ನು ರಕ್ಷಿಸಲು ತೆಗೆದುಕೊಂಡ ಕ್ರಮಗಳೇನು